



# ತಿತ್ತಿರಿ ಹಕ್ಕಿಯ ತಿರುಗಾಟ

■ ಚಿತ್ರ– ಬರಹ: **ಶಿವಪ್ರಕಾಶ್ ಭೋಗಣ್ಣ**

ಬೆಂಗಳೂರಿನ ಗಾಂಧಿ ಕೃಷಿ ವಿಶ್ವವಿದ್ಯಾಲಯದ ಹಸಿರಾದ ಗಿಡಮರಗಳ ನಡುವೆ ಮುಂಜಾನೆಯ ಕಾಲ್ನಡಿಗೆಯಲ್ಲಿದ್ದಾಗ ಪಕ್ಷಿಯ ಜೋರಾದ ಟಿ..ಟ್ವೀ..ಟೂ..ಟಿಟ್.. ಎಂಬ ಕೂಗು ಕಿವಿಗೆ ಬಿತ್ತು. ಬೇರೆ ಯಾವ ಹಕ್ಕಿಗಳ ಸದ್ದೂ ಇರಲಿಲ್ಲ. ಇದ್ಯಾವುದು ಈ **‘early waking bird’** ಎಂದುಕೊಳ್ಳು-ವಾಗ ಇದರ ಕೂಗು ಜೋರಾಗೇ ಇತ್ತು, ಆದರೆ ಆ ಪಕ್ಷಿ ಮಾತ್ರ ಎಲ್ಲೂ ಕಾಣಲಿಲ್ಲ!

ನೆಲಮಟ್ಟದಿಂದ, ಇನ್ನೂ ಸಮೀಪದಿಂದ ಕೂಗು ಬಂದಾಗ, ಸರಿಯಾಗಿ ದಿಟ್ಟಿಸಿದರೆ ಸ್ವಲ್ಪ ದೂರದಲ್ಲಿ ನೆಲದ ಮೇಲೆ ಮಣ್ಣಿನ ಬಣ್ಣದಲ್ಲೇ ಇದ್ದ ಈ ಪಕ್ಷಿ ಕಾಣಿಸಿತು. ಪಾರಿವಾಳದ ಗಾತ್ರದ ಈ ಹಕ್ಕಿ ಮಣ್ಣಿನ ಹಿನ್ನೆಲೆಯಲ್ಲಿ ಕಾಣಿಸುವುದೇ ಕಷ್ಟವಿತ್ತು. ಆದರೆ, ಅದರ ಕಣ್ಣಿನ ಸುತ್ತಲೂ ಇದ್ದ ಗಾಢ ಕೆಂಪು ಬಣ್ಣ ಮತ್ತು ಹಳದಿಯ ನೀಳ ಕಾಲುಗಳು ಇದು ಗೋಚರಿಸುವಂತೆ ಮಾಡಿದವು. ನಿಂತಲ್ಲಿ ನಿಲ್ಲದೇ, ಯಾವುದೋ ಆತುರದಲ್ಲಿ ಇದ್ದಂತೆ ಒಂದೇ ಸಮನೆ ಅತ್ತಿತ್ತ ಓಡಾಡುತ್ತಾ, ನೆಲದಿಂದ ಹುಳುಗಳನ್ನು ಹಿಡಿದು ತಿನ್ನುತ್ತಾ, ಮಧ್ಯದಲ್ಲಿ ಜೋರಾಗಿ ಕೂಗುತ್ತಾ, ಮುಂಜಾವಿಗೆ ಹೊಸ ಉತ್ಸಾಹವನ್ನು ಅದು ತುಂಬಿಸಿತ್ತು. ಹೆಗಲಿನಲ್ಲಿದ್ದ ಕ್ಯಾಮೆರಾದಿಂದ ಒಂದೆರಡು ಚಿತ್ರಗಳನ್ನು ಕ್ಲಿಕ್ಕಿಸುವಷ್ಟರಲ್ಲಿ ಪುರ್ರನೇ ಹಾರಿ ಮರೆಯಾಯಿತು.

ನಂತರ, ಅಂತರ್ಜಾಲದಲ್ಲಿ ತಡಕಾಡಿದಾಗ ಇದರ ಬಗ್ಗೆ ಮಾಹಿತಿ ಸಿಕ್ಕಿತು. ಇದರ ಹೆಸರು ‘ರೆಡ್ ವ್ಯಾಟ್ಲಡ್ ಲ್ಯಾಪ್ ವಿಂಗ್’. ಕನ್ನಡದಲ್ಲಿ ಇದಕ್ಕೆ ಟಿಟ್ಟಿಭ ಅಥವಾ ತಿತ್ತಿರಿ ಹಕ್ಕಿ ಎನ್ನುತ್ತಾರೆ. ಇದು ಹೆಚ್ಚಿನ ಸಮಯವನ್ನು ನೆಲದ ಮೇಲೆಯೇ ಕಳೆಯುತ್ತದೆ. ಸಣ್ಣ ಪುಟ್ಟ ಕ್ರಿಮಿ ಕೀಟಗಳೇ ಇದರ ಆಹಾರ. ಭಾರತವೂ ಸೇರಿದಂತೆ ದಕ್ಷಿಣ ಏಷ್ಯಾದ ಹಲವು ದೇಶಗಳಲ್ಲಿ ಕಂಡುಬರುವ ಟಿಟ್ಟಿಭ ಹಕ್ಕಿ ಹೊಲ ಗದ್ದೆಗಳಲ್ಲಿ, ಸಣ್ಣ ಕೊಳದ ತೀರದಲ್ಲಿ ವಾಸಿಸುತ್ತದೆ. ಕೊಕ್ಕಿನಿಂದ ಕಣ್ಣಿನವರೆಗೂ ಇರುವ ಗಾಢ ಕೆಂಪು ಬಣ್ಣ ಎದ್ದು ಕಾಣುತ್ತದೆ. ಕಣ್ಣಿನ ಕೆಳಗಿನಿಂದ ಬಾಲದವರೆಗೂ ಒಂದು ಬಿಳಿಯ ಪಟ್ಟಿ ಇದ್ದು, ಹಾರುವಾಗ ಮಾತ್ರ ಇದು ಕಾಣಿಸುತ್ತದೆ.

ಇದರ ವಿಶಿಷ್ಟವಾದ ಕೂಗಿನಿಂದಾಗಿ ಇದಕ್ಕೆ ‘ಡಿಡ್ ಹಿ ಡೂ ಇಟ್’ ಹಕ್ಕಿ ಎಂಬ ಹೆಸರೂ ಇದೆ! ಬೆಳಿಗ್ಗೆಯ ಹೊತ್ತ ಚುಮುಚುಮು ಬೆಳಕಿನಲ್ಲಿ ಇದರ ಧ್ವನಿ ಎಲ್ಲಾದರೂ ಕೇಳಿಸಿದರೆ, ಕಣ್ಣಿನ ಸುತ್ತಲೂ ಇರುವ ಗಾಢ ಕೆಂಪು ಬಣ್ಣ ಮತ್ತು ಹಳದಿಯ ನೀಳ ಕಾಲುಗಳ ಸೌಂದರ್ಯ ಗಮನಿಸಲು ಮರೆಯಬೇಡಿ.